ಅಲ್ಲಿ ಬೇರೆ ಜನಗಳು ಪಾಲುಗೊಳ್ಳುವಂಥಾದ್ದು, ಅಲ್ಲಿಯ ಪ್ರಾಯೋಜಕರಾಗಿರತಕ್ಕಂಥವರು ಮತ್ತು ಅದರ ಅನುಕೂಲಗಳನ್ನು ಪಡೆದಂಥವರು ಮಾತ್ರ ಇದರಲ್ಲಿ ಭಾಗವಹಿಸುತ್ತಾರೆ. ಆದರೆ ಇಲ್ಲಿ ಕೈಗಾರಿಕೋದ್ಯಮಿಗಳು, ಬ್ಯಾಂಕುಗಳು ಮತ್ತು ಬೇರೆ ಬೇರೆ ಸಂಘ ಸಂಸ್ಥೆಗಳೂ ಕೂಡ ಇದರಲ್ಲಿ ಪಾಲುಗೊಳ್ಳಲು ಅವಕಾಶವಿದೆ. ಆದ್ದರಿಂದ ಅದಕ್ಕೂ ಇದಕ್ಕೂ ಸ್ವಲ್ಪ ಮಟ್ಟಿಗೆ ವ್ಯತ್ಯಾಸ ಇದೆ. ನಾವು ಇದರಲ್ಲಿ ರಾಜಕೀಯ ಹಸ್ತಕ್ಷೇಪ ಮಾಡುತ್ತೇವೆ ಎನ್ನುವಂಥ ಪ್ರಶ್ನೆ ಬರುವುದಿಲ್ಲ. ಏಕೆಂದರೆ 224 ಕ್ಷೇತ್ರಗಳಲ್ಲಿ ಒಂದೊಂದನ್ನು ಆಯ್ಕೆ ಮಾಡುವಂಥ ಸಂದರ್ಭ ಬಂದಾಗ ನಾವು ಅದರಲ್ಲಿ ಭೇದಭಾವ ಮಾಡುತ್ತೇವೆ ಎಂದು ತಾವು ಅದರಲ್ಲಿ ಸಂಶಯ ಪಡಬೇಕಾದಂಥ ಅಗತ್ಯವಿಲ್ಲ.

ಮೂಡುಶೆಡ್ಡೆಯಲ್ಲಿ ಜನರಲ್ ಆಸ್ಪತ್ರೆ ತೆರೆಯುವುದರ ಬಗ್ಗೆ

550 - ಶ್ರೀ ಕುಂಬ್ಳೆ ಸುಂದರರಾವ್ (ಸುರತ್ಕಲ್) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) *ಮಂಗಳೂರಿನಿಂದ ಕಾರ್ಕಳದತನಕ ಬರುವ ಊರುಗಳಲ್ಲಿ ಪೂರ್ಣರೂಪದ ಸರ್ಕಾರಿ ಆಸ್ಪತ್ರೆ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

2) *ಮಂಗಳೂರು ವೆನ್‌ಲಾಕ್ ಆಸ್ಪತ್ರೆಯ ಹೊರತು ಪೂರ್ಣರೂಪದ ಆಸ್ಪತ್ರೆಯೊಂದು ಮೂಡುಶೆಡ್ಡೆಯಲ್ಲಿ ಸ್ಥಾಪಿಸಬೇಕೆಂಬ ಮನವಿ ಸರ್ಕಾರಕ್ಕೆ ಬಂದಿದೆಯೇ?*

3) *ಮೂಡುಶೆಡ್ಡೆಯಲ್ಲಿ ಹೊಸದಾಗಿ ನಿರ್ಮಾಣವಾದ ಕಟ್ಟಡದಲ್ಲಿ ಕ್ಷಯ ರೋಗ ಆಸ್ಪತ್ರೆಯ ಜೊತೆಯಲ್ಲಿ ಜನರಲ್ ಆಸ್ಪತ್ರೆಯನ್ನು ತೆರೆಯುವ ಬಗ್ಗೆ ಸರ್ಕಾರ ಯೋಚಿಸುವುದೇ?*

ಡಾ|| ಹೆಚ್. ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಬಂದಿದೆ.

ಆ) ಬಂದಿರುವುದಿಲ್ಲ.

ಇ) ಜಿಲ್ಲಾ ಪಂಚಾಯಿತಿ, ದಕ್ಷಿಣ ಕನ್ನಡ, ಮಂಗಳೂರು ಇವರಿಂದ 50 ಹಾಸಿಗೆ ಆಸ್ಪತ್ರೆಯನ್ನು ಸ್ಥಾಪಿಸುವ ಬಗ್ಗೆ ಅವಶ್ಯಕವಾದ ಪ್ರಸ್ತಾವನೆ ಬಂದಲ್ಲಿ ಅದನ್ನು ಪರಿಶೀಲಿಸಲಾಗುವುದು.

ಶ್ರೀ ಕುಂಬಳೆ ಸುಂದರರಾವ್ : ಮಾನ್ಯ ಅಧ್ಯಕ್ಷರೇ, ಮಂಗಳೂರಿನಿಂದ ಕಾರ್ಕಳದತನಕ ಬರುವ ಊರಿನಲ್ಲಿ ಮಧ್ಯೆ ಎಲ್ಲೂ ಸಹ ಪೂರ್ಣ ರೂಪದ ಆಸ್ಪತ್ರೆ ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದರೆ, ಬಂದಿದೆ ಎಂದು ಉತ್ತರ ಕೊಟ್ಟಿದ್ದಾರೆ. ಆದರೆ, ವೆನಲಾಕ್ ಆಸ್ಪತ್ರೆಯ ಹೊರತು ಪೂರ್ಣ ರೂಪದ ಆಸ್ಪತ್ರೆಯೊಂದನ್ನು ಮೂಡುಶೆಡ್ಡೆಯಲ್ಲಿ ಸ್ಥಾಪಿಸಲು ಸರ್ಕಾರ ಸಿದ್ಧವಿದೆಯೇ ಎಂದು ಕೇಳಿದರೆ, ಅಂಥ ಅಪೇಕ್ಷೆ ಬಂದಿರುವುದಿಲ್ಲ ಎಂದು ಉತ್ತರ ಹೇಳುತ್ತಾರೆ. ನನಗನ್ನಿಸುತ್ತದೆ, ಸರ್ಕಾರದಿಂದ ಅಥವಾ ಅಧಿಕಾರಿಗಳಿಂದ ಆರೋಗ್ಯ ಸಚಿವರಿಗೆ ಸರಿಯಾದ ಮಾಹಿತಿ ಬಂದಿಲ್ಲ. ನಾವು ಮನವಿ ಕೊಟ್ಟಿದ್ದೇವೆ, ಊರಿನಲ್ಲಿ ಸಭೆ ಮಾಡಿ ನಿರ್ಣಯ ಮಾಡಿ ಕಳುಹಿಸಿದ್ದೇವೆ, ಒಂದು

ಪೂರ್ಣರೂಪದ ಆಸ್ಪತ್ರೆ ಮೂಡುಶೆಡ್ಡೆಯಲ್ಲಿ ಆಗಬೇಕು ಎನ್ನುವ ಅವಶ್ಯಕ ಬೇಡಿಕೆ ಏನಿದೆ ಅದನ್ನು ಮತ್ತೆ ಮತ್ತೆ ಒತ್ತಾಯದ ರೂಪದಲ್ಲಿ ತಂದಿದ್ದೇವೆ. ಅಂಥಾ ಒಂದು ಆಸ್ಪತ್ರೆ ಬೇಕು ಎಂದಾದರೆ ನೀವು ಜಿಲ್ಲಾ ಪಂಚಾಯಿತಿಯ ಅನುಮೋದನೆಯಿಂದ ಕಳುಹಿಸಿಕೊಟ್ಟರೆ ಪರಿಶೀಲಿಸಲಾಗುವುದು ಎಂದು ಈಗ ನೀವು ಹೇಳುತ್ತಿದ್ದೀರಿ. ಆಸ್ಪತ್ರೆ ಇಲ್ಲ ಎನ್ನುವುದು ನಿಮ್ಮ ಗಮನಕ್ಕೆ ಬಂದಿದೆ. ಅದೇ ರೀತಿ, ಬೇಕು ಎನ್ನುವುದೂ ನಿಮ್ಮ ಗಮನಕ್ಕೆ ಬರಬೇಕಲ್ಲವೇ? ಮೂಡುಶೆಡ್ಡೆಯಲ್ಲಿ ನಾವು ಕೇಳುತ್ತಿದ್ದೇವೆ. ಅಲ್ಲಿ ಬೇಡ ಎಂದು ನಿಮ್ಮ ಯೋಜನೆಯಲ್ಲಿ ಬೇರೆಲ್ಲಾದರೂ ಮಾಡುವ ಅಭಿಪ್ರಾಯ ಇದೆಯೇ? ಮೂಡಿಬಿದರೆಯಲ್ಲಿ ಮಾಡುತ್ತೀರಾ? ವೆಂಗಿಮಠದಲ್ಲಿ ಮಾಡುತ್ತೀರಾ? ವಾಮಂಜೂರಿನಲ್ಲಿ ಮಾಡುತ್ತೀರಾ? ಮಧ್ಯೆ ಎಲ್ಲೂ ಇಲ್ಲ. ಆದ್ದರಿಂದ, ಮೂಡುಶೆಡ್ಡೆಯನ್ನೇ ನಾವು ಹೆಚ್ಚು ಒತ್ತು ಕೊಟ್ಟು ಏಕೆ ಕೇಳುತ್ತಿದ್ದೇವೆ ಎಂದು ಮಾನ್ಯ ಸಚಿವರಿಗೆ ಗೊತ್ತಿದೆ. ಅಲ್ಲಿ 200 ಎಕರೆಗಿಂತ ಹೆಚ್ಚು ಸರ್ಕಾರಿ ಸ್ಥಳ ಇದೆ. ಹಳೆಯ ಕಟ್ಟಡದಲ್ಲಿ ಕ್ಷಯರೋಗ ಆಸ್ಪತ್ರೆ ನಡೆಯುತ್ತಿದೆ. ಈ ಕಾರಣಕ್ಕಾಗಿ ಅಲ್ಲಿ ಸ್ಥಳದ ಪ್ರಶ್ನೆ ಬರುವುದಿಲ್ಲ ಎನ್ನುವುದು ಒಂದು. ಎರಡನೆಯದಾಗಿ, ಅಲ್ಲಿ ನೀವು ಒಂದು ಕಟ್ಟಡ ಮಾಡಿಸಿದ್ದೀರಿ. ಆಸ್ಪತ್ರೆಯನ್ನು ಮಾಡುವ ಉದ್ದೇಶ ಇಲ್ಲದಿದ್ದರೆ ಲಕ್ಷಾಂತರ ರೂಪಾಯಿಗಳ ಕಟ್ಟಡವನ್ನು ನೀವು ಏಕೆ ಮಾಡಿಸಿದಿರಿ? ಅದು ಬಿಡುಗಡೆಯಾಗಿ ನಿಮ್ಮ ಕೈಗೆ ಬರಬೇಕಾದರೆ 4 ವರ್ಷಗಳಾಯಿತು. ಕಳೆದ ಸಲ ನಾನೆ ಸದನದಲ್ಲಿ ನಾನು ಇದರ ಬಗ್ಗೆ ಮತ್ತೆ ಮತ್ತೆ ಒತ್ತಡ ತಂದ ಮೇಲೆ ಇದನ್ನು ಸ್ವಾಧೀನಕ್ಕೆ ತೆಗೆದುಕೊಂಡಿದ್ದೀರಿ. ಅದರಲ್ಲಿ ನೀವು ಏನು ಮಾಡುವವರಿದ್ದೀರಿ? ನಾನು ಕೇಳಿರುವ ಆಸ್ಪತ್ರೆಯನ್ನು ಮಾಡಲು ಅಲ್ಲಿ ಅನುಕೂಲ ಇದೆ. ಸ್ವಲ್ಪ ಖರ್ಚು ಮಾಡಿದರೆ ಜನರಿಗೆ ಉಪಯೋಗವಾಗುತ್ತದೆ. ಕ್ಷಯರೋಗ ಆಸ್ಪತ್ರೆಯಲ್ಲಿ 100 ರೋಗಿಗಳ ಸ್ಥಳಾವಕಾಶ ಏನಿದೆ ಅದನ್ನು 50ಕ್ಕೆ ಇಳಿಸಿ, 50ನ್ನು ಆ ಕಡೆ ಕಳುಹಿಸಿದರೆ ಊರು ಆರೋಗ್ಯಭರಿತವಾಗುತ್ತದೆ. ಮೂಡುಶೆಡ್ಡೆಯಲ್ಲಿ ಒಂದು ಪೂರ್ಣ ಪ್ರಮಾಣದ ಆಸ್ಪತ್ರೆ ಸಿದ್ಧವಾಗುತ್ತದೆ. ಇದರ ಬಗ್ಗೆ ತಾವು ಚಿಂತಿಸುವಿರಾ?

ಡಾ॥ ಹೆಚ್. ಸಿ. ಮಹದೇವಪ್ಪ : ಸನ್ಮಾನ್ಯ ಸಭಾಧ್ಯಕ್ಷರೇ, ಕಳೆದ ಬಾರಿಯೂ ಸನ್ಮಾನ್ಯ ಸದಸ್ಯರು ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದರು. ಅವರ ಮೂಲ ಉದ್ದೇಶವೆಂದರೆ, ಅಲ್ಲಿ ಒಂದು 50 ರೋಗಿಗಳ ಆಸ್ಪತ್ರೆಯನ್ನು ಸ್ಥಾಪನೆ ಮಾಡಬೇಕು ಎನ್ನುವುದು. ಈಗಾಗಲೇ ಅಲ್ಲಿ 1982ರಲ್ಲಿ 50 ಹಾಸಿಗೆಗಳ ಹೊಸ ಕ್ಷಯರೋಗದ ಆಸ್ಪತ್ರೆಯ ಕಟ್ಟಡ ಮಾಡಲಾಗಿದೆ. ಕಳೆದ ತಿಂಗಳು ನಾವು ಅದನ್ನು ಕೈಗೆ ತೆಗೆದುಕೊಂಡು ಒಂದು ಓ.ಪಿ.ಡಿ. ಬ್ಲಾಕ್ ಮಾಡಿದ್ದೇವೆ, ಸಬ್ ಸ್ಟೋರ್ ಮಾಡಿದ್ದೇವೆ. ಆಡಳಿತ ಸಿಬ್ಬಂದಿಯನ್ನು ನೇಮಕ ಮಾಡಿದ್ದು ಅಲ್ಲಿ ಕಳೆದ ಒಂದು ತಿಂಗಳಿಂದ ಕೆಲಸ ಆಗುತ್ತಿದೆ. ತಾಲ್ಲೂಕು ಮತ್ತು ಜಿಲ್ಲಾ ಆಸ್ಪತ್ರೆಗಳನ್ನು ಕರ್ನಾಟಕ ಆರೋಗ್ಯ ಪದ್ಧತಿಗಳ ಘತಿಯಿಂದ ಮೇಲ್ದರ್ಜೆಗೆ ಏರಿಸುವ ಪ್ರಕ್ರಿಯೆ ಈಗಾಗಲೇ ಪ್ರಾರಂಭವಾಗಿದ್ದರೂ ಕೂಡ ಇದು ಆ ಭಾಗಕ್ಕೆ ಸೇರಿಲ್ಲ. ಇದು ಜಿಲ್ಲಾಪರಿಷತ್ತಿನ ವ್ಯಾಪ್ತಿಯಲ್ಲಿ ಬರುವುದರಿಂದ ಅಲ್ಲಿಂದ ಅವರು ಶಿಫಾರಸ್ಸು ಕಳುಹಿಸಿಕೊಟ್ಟರೆ ನಾವು ಸರ್ಕಾರದವರು ಅದನ್ನು ಪರಿಗಣನೆ ಮಾಡುತ್ತೇವೆ. ಸಮಾನ್ಯವಾಗಿ ಅಧಿಕಾರಿಗಳು ತಪ್ಪು ಮಾಹಿತಿ ಕೊಡುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ, ನಾನು ಖುದ್ದಾಗಿ ಪ್ರತಿಯೊಂದನ್ನು ಪರಿಶೀಲನೆ ಮಾಡುವಾಗ ಅಧಿಕಾರಿಗಳು ಸಾಮಾನ್ಯವಾಗಿ ಸಮಂಜಸವಾದ ಉತ್ತರವನ್ನು ಕೊಡುತ್ತಾರೆ ಹಾಗೂ ನಾನು ಕೂಡ ಸಮಂಜಸವಾದ

ಉತ್ತರವನ್ನು ಪಡೆದು ಸದಸ್ಯರಿಗೆ ಮತ್ತು ಸದನಕ್ಕೆ. ಕೊಡತಕ್ಕಂಥ ಪ್ರಯತ್ನವನ್ನು ನಾನು ಕಳೆದ ಎರಡೂವರೆ ಮೂರು ವರ್ಷಗಳಿಂದ ಮಾಡುತ್ತಿದ್ದೇನೆ. ಆದ್ದರಿಂದ ಜಿಲ್ಲಾಪರಿಷತ್ತಿನವರಿಂದ ಶಿಫಾರಸ್ಸು ಬಂದರೆ ಅದನ್ನು ಮಾಡುತ್ತೇನೆ. ತಮಗೆ ಗೊತ್ತಿದೆ ಅಲ್ಲಿ ಕುಡಿಯುವುದಕ್ಕೆ ನೀರು ಇಲ್ಲ, ಅಲ್ಲಿ ಅಧಿಕಾರಿಗಳ ತಂಡವನ್ನು ಕಳುಹಿಸಿ ಕುಡಿಯುವುದಕ್ಕೆ ನೀರು ಹಾಕಿಸಿದ್ದೇನೆ. ನೂರಾರು ಗುಡಿಸಲುಗಳನ್ನು ಹಾಕಿಕೊಂಡಿದ್ದರು. ಒಂದು ಸಂಸ್ಥೆ ಅಲ್ಲಿ ನೂರಾರು ಏಕರೆ ಜಮೀನು ತೆಗೆದುಕೊಳ್ಳಲು ಜಿಲ್ಲಧಿಕಾರಿಯವರಿಂದ ಪ್ರಯತ್ನ ಮಾಡುತ್ತಿದ್ದಾರೆ. ಇದೆಲ್ಲ ತಮಗೆ ಗೊತ್ತಿರತಕ್ಕಂಥ ವಿಚಾರ. ಅದರೆ ಟಿ.ಬಿ. ಡಾರ್ಮಸಿಯಲ್ಲಿ ಟ್ರೀಟ್‌ಮೆಂಟ್ ಆದಮೇಲೆ ಟಿ.ಬಿ. ಆಸ್ಪತ್ರೆಗಳನ್ನು ತೆರೆಯಲು ಕೇಂದ್ರ ಸರ್ಕಾರದಲ್ಲಿ ಅವಕಾಶ ಇಲ್ಲ. ಮನೆಯಲ್ಲಿ ಈ ರೋಗ ವಾಸಿ ಮಾಡತಕ್ಕಂಥ ಸಾಮರ್ಥ್ಯ ಇರುವುದರಿಂದ ಮತ್ತು ಡಾಟ್ಸ್ ಥೆರಪಿ ಬಂದಿರುವುದರಿಂದ ಈಗ ಅಂತಹ ಪರಿಸ್ಥಿತಿ ಇಲ್ಲ. ಜಿಲ್ಲಾಪರಿಷತ್ತಿನಿಂದ ಶಿಫಾರಸ್ಸು ಬಂದರೆ ಸರ್ಕಾರ ಅದನ್ನು ಪರಿಶೀಲನೆ ಮಾಡುತ್ತದೆ.

ಶ್ರೀ ಕುಂಬಳೆ ಸುಂದರ್‌ರಾವ್ : ಅಲ್ಲಿರುವ ಟಿ.ಬಿ. ಆಸ್ಪತ್ರೆಯನ್ನು ನಾನು ತೆಗೆಯಬೇಕು ಎಂದು ಖಂಡಿತವಾಗಿ ಹೇಳುತ್ತಿಲ್ಲ. ಮೊದಲು ಜನ ಆಸ್ಪತ್ರೆ ಹತ್ತಿರ ಹೋಗುತ್ತಿರಲಿಲ್ಲ. ಮನುಷ್ಯರು ಕೂಡ ಟಿ.ಬಿ. ರೋಗಿಗಳ ಹತ್ತಿರ ಹೋಗುತ್ತಿರಲಿಲ್ಲ. ಈಗ ಪರಿಸ್ಥಿತಿ ಬದಲಾಗಿದೆ. ಟಿ.ಬಿ. ರೋಗ ಮಾರಕ ರೋಗ ಅಲ್ಲ ಎಂದು ಭಾವನೆ ಜನರಲ್ಲಿ ಬಂದಿದೆ. ಆದುದರಿಂದ ಈ ನಿಟ್ಟಿನಲ್ಲಿ ಇನ್ನೊಂದು ಆಸ್ಪತ್ರೆಗೆ 250 ಎಕರೆ ಸ್ಥಳ ಇರುವಾಗ ತಾವು ಮನಸ್ಸು ಮಾಡಿದರೆ ಕಷ್ಟ ಇಲ್ಲ. ಆ ಜಿಲ್ಲಾಪರಿಷತ್ತಿನ ಅಪೇಕ್ಷೆ ಏನು ಇದೆ ಅದು ಬರಲಿ ಆದರೆ ನೀವು ಮನಸ್ಸು ಮಾಡಿದರೆ ಅದನ್ನು ಬರೆದು ತರಿಸಲಿಕ್ಕೆ ಬರುತ್ತದೆ. ನೋಡಿ ಈ ರೀತಿ ಆಸ್ಪತ್ರೆಯನ್ನು ಮಾಡುತ್ತಿದ್ದೇವೆ ಒಂದು ಒಪ್ಪಿಗೆ ಕೊಡಿ ಎಂದರೆ ಎಷ್ಟು ಸುಲಭ. ಅವರು ಕೊಡುವುದಕ್ಕಿಂತ ನೀವೇ ಕೇಳಿ ಪಡೆದುಕೊಂಡು ಮಾಡುವುದು ನಿಮ್ಮ ಅಧಿಕಾರದಲ್ಲಿ ಇದೆ.

ಡಾ|| ಹೆಚ್. ಸಿ. ಮಹದೇವಪ್ಪ : ಈ ಆಸ್ಪತ್ರೆಗಳು ಜಿಲ್ಲಾಪರಿಷತ್ತಿನ ಆಡಳಿತ ವ್ಯಾಪ್ತಿಗೆ ಬರುವುದರಿಂದ ಸರ್ಕಾರದವರು ನೇರವಾಗಿ ನಿರ್ಧಾರ ಮಾಡುವುದಕ್ಕೆ ಬರುವುದಿಲ್ಲ. ಆದರೂ ಜನರಿಗೆ ಅನುಕೂಲವಾಗುವಂಥ ಕಾರ್ಯವಿರುವುದರಿಂದ ನಾನು ಕೂಡ ಮಾನ್ಯ ಸದಸ್ಯರ ಇಚ್ಛೆಯಂತೆ ಜಿಲ್ಲಾಪರಿಷತ್ತಿಗೆ ಒಂದು ವರದಿಯನ್ನು ಕೇಳುತ್ತೇನೆ. ಅವರಿಂದ ಶಿಫಾರಸ್ಸು ಬಂದರೆ ಅದನ್ನು ಪರಿಗಣನೆ ಮಾಡುತ್ತೇವೆ.

ಫಾರ್ಮಸಿಸ್ಟ್‌ರಿಗೆ ತರಬೇತಿ

552 - ಶ್ರೀ ಹೆಚ್. ಎಸ್. ಶಂಕರಲಿಂಗೇಗೌಡ (ಚಾಮರಾಜ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಔಷಧ ವಿತರಕರುಗಳ ಹುದ್ದೆಗೆ ತರಬೇತಿ ನೀಡುವ ಕಾರ್ಯಕ್ರಮವು ಭಾರತೀಯ ವೈದ್ಯ ಪದ್ಧತಿ ಇಲಾಖೆಯಲ್ಲಿ ಈ ಹಿಂದೆ ನಡೆಸಲಾಗುತ್ತಿದೆ?

ಆ) ಹಾಗಿದ್ದಲ್ಲಿ ಈ ಕಾರ್ಯಕ್ರಮವನ್ನು ನಿಲ್ಲಿಸಿರಲು ಕಾರಣವೇನು?